ಎರಡು ಎಕರೆ ಜಮೀನು ಬರೆದುಕೊಟ್ಟು ಪಾರಿ ಆಬಾರ್ಷನ್ ಮಾಡಿಸಿಕೊಳ್ಳಬೇಕೆಂದು ತಾಕೀತು ಮಾಡಿ ಪೂರ ಕೈ ತೊಳೆದುಕೊಂಡದ್ದು. ಅಂದಿನ ಗುಪ್ತ ಸಭೆಯಲ್ಲಾದದ್ದು ಇದೇ ತೀರ್ಮಾನವಿರಬೇಕು. ವಿಷಯದ ಅಸ್ಥಿಪಂಜರವನ್ನು ನನ್ನ ಹದಿಹರೆಯದ ತಲೆಯಲ್ಲಿ ತುರುಕಿ ಅಮ್ಮ ನಿರಾಳವಾಗಿಬಿಟ್ಟರು. ಆದರೆ, ಆ ಅಸ್ಥಿಪಂಜರಕ್ಕೆ ರಕ್ತ ಮಾಂಸ ತುಂಬಿಸುವ, ಬೇಡವೆಂದರೂ ಬೇಕಾಗಿ ಬರುವ ಬಲವಂತದ ಕಲ್ಪನೆಗಳು ಹೇಸಿಗೆ ಹುಟ್ಟಿಸಲಾರಂಭಿಸಿದವು, ಮೊದಲು ದೊಡ್ಡಪ್ಪನ ಬಗ್ಗೆ, ನಂತರ ದೊಡ್ಡಮ್ಮನ ಬಗ್ಗೆ... ಹಳ್ಳಿಗೆ ಹೋಗುವುದೇ ಬೇಡವಾಯಿತು. ಹೋದರೂ ದೊಡ್ಡಪ್ಪನ ಮನೆಗೆ ಹೋಗಲು ಏನೋ ಅವ್ಯಕ್ತ ಭಯ ಕಾಡತೊಡಗಿತು. ಕಾಲ ಕ್ರಮೇಣ ನಮ್ಮ ಓದು, ಕೆಲಸ, ಮದುವೆ... ಬದುಕು ಕಟ್ಟಿಕೊಳ್ಳುವ ಭರಾಟೆಯಲ್ಲಿ ನಮ್ಮ ಚಿತ್ತಪಟಲದಿಂದ ದೂರವಾಗಿ ಹೋದಳು ಪಾರಿ... ಅಥವಾ ನಾವೇ ಮನಸ್ಸಿನಿಂದ ದೂರ ತಳ್ಳಿಬಿಟ್ಟೆವು ಎನಿಸುತ್ತದೆ. ಬುದ್ಧಿ ಇಲ್ಲದ ಬಾಲ್ಯದಲ್ಲಿ ಕಂಡದ್ದೆಲ್ಲಾ ಅರ್ಥವಾಗದೇ, ವಿಚಿತ್ರವಾಗಿ, ಹಾಗೆ ಅರ್ಧ ಸತ್ಯವಾಗಿ ಉಳಿಯುವ ಗೊಂದಲ... ಗೊಂದಲದಲ್ಲೇ ಸೌಂದರ್ಯ ಕಂಡುಕೊಂಡ ಬಾಲ್ಯದ ಅಪೂರ್ಣತೆ. ಆದರೆ ಬುದ್ಧಿ ಬಲಿತ ಮೇಲೆ ಅಂದು ಅರ್ಥವಾಗದ್ದು ಈಗ ಸ್ಪಷ್ಟವಾಗತೊಡಗಿದಾಗ ಎಲ್ಲವೂ ಕುರೂಪ, ಎಲ್ಲರೂ ಕ್ರೂರಿಗಳು... ಪೂರ್ಣ ಪ್ರಮಾಣದ ಸತ್ಯ ಯಾರಿಗೆ ಸುಖ ತಂದಿದೆಯೋ ಗೊತ್ತಾಗುತ್ತಿಲ್ಲ. ಅರ್ಧಸತ್ಯದಲ್ಲಿ ಅಡಗಿರುವ ಬದುಕಿನ ಜಿಜ್ಞಾಸೆ, ಹುಮ್ಮಸ್ಸು, ಹುಡುಕಾಟ... ಇವುಗಳಿಂದ ಪ್ರಾಪ್ತವಾಗುವ ನೆಮ್ಮದಿ ಶಾಂತಿ, ಸತ್ಯ ಗೋಚರವಾಗುತ್ತಿದ್ದ ಹಾಗೆ ಮಾಯವಾಗಿ ಬಿಡುತ್ತದೆ. ಅರ್ಥವಾದರೂ ಅರ್ಥವಾಗದ ಹಾಗೆ ನಟಿಸುತ್ತಾ ಮುಖವಾಡಗಳನ್ನು ಧರಿಸಿ ಬದುಕುವುದು ಇದಕ್ಕೆ ಇರಬೇಕು ಎನಿಸುತ್ತದೆ. ಈ ಜಗದಲ್ಲಿ ಸತ್ಯ ಹುಡುಕಿಕೊಂಡು ಹೋದವರಿಗೆ ಎಲ್ಲಿ ದೊರಕಿದೆ ನೆಮ್ಮದಿ? ಸತ್ಯ ಗೋಚರವಾಗದಿದ್ದರೆ ಗೊಂದಲ, ಸಿಕ್ಕರಂತೂ ನೆಮ್ಮದಿ ಪೂರಾ ಹಾಳು, ಅರ್ಧ ಸತ್ಯದ ಉಯ್ಯಾಲೆಯಲ್ಲಿ ಜೀಕುವುದೇ ನಾವು 'ಸುಂದರ' ಎಂದುಕೊಳ್ಳುವ ಕತೂಹಲಕಾರಿ ಜಗತ್ತು. ಪಾರಿಯ ಗೊಂದಲದ ವಿಷಯ ಮರೆತುಹೋಗಿ ಎಂಟು ವರ್ಷಗಳು ಕಳೆದು ನೆಮ್ಮದಿಯ ಬದುಕು ಎಂದೆನಿಸದಿದ್ದರೂ ಮಾಮೂಲು ಎಂದು ಕೊಳ್ಳುತ್ತಿರುವಾಗಲೇ ದೊಡ್ಡಮ್ಮನಿಗೆ ಕ್ಯಾನ್ಸರ್ ಆಗಿ ತೀರಿಕೊಂಡರು. ಒಂದೇ ವರ್ಷದ ನಂತರ ದೊಡ್ಡಪ್ಪ ಬಡವರ ಮನೆಯ ವಯಸ್ಸಾದ ಹುಡುಗಿಯೊಬ್ಬಳನ್ನು ಮದುವೆಯಾದರು ಎಂದು, ನಂತರ ಮಗನೂ ಜನಿಸಿದ. ಮನೆತನಕ್ಕೆ ವಂಶೋದ್ಧಾರಕ ದೊರೆತು ಸಂತಸದ ಬದುಕು ಸಾಗಿಸುತ್ತಿದ್ದಾರೆಂದು ವಿಷಯ ತಿಳಿದು ನಿರ್ಲಿಪ್ತ ನಿಟ್ಟುಸಿರುಬಿಟ್ಟರು ಎಲ್ಲಾ ಬಂಧುಗಳು. ಈಗ ಹುಡುಗ ದೊಡ್ಡವನಾಗಿ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದಾನೆ, ದೊಡ್ಡಪ್ಪನನ್ನು ಮನಃಪೂರ್ವಕವಾಗಿ ಒಪ್ಪಿಕೊಳ್ಳಲಾಗದಿದ್ದರೂ, ಕಾಯಿಲೆಯ ಕಾರಣ ಮಾಡಿ

